9-72 (16)

**ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರುಗಳಾದ ಶ್ರೀ ಪುಟ್ಟಣ್ಣ, ಶ್ರೀ ಮರಿತಿಬ್ಬೇಗೌಡ ಮತ್ತು ಶ್ರೀ ಕೆ.ಟಿ. ಶ್ರೀಕಂಠೇಗೌಡರವರು ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಮಾನ್ಯ ಉಪ ಮುಖ್ಯ ಮಂತ್ರಿಗಳು(ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಹಾಗೂ ಜೀವನೋಪಾಯ ಇಲಾಖೆ)ರವರ ಹೇಳಿಕೆ.**

**ವಿಷಯ:**

ಅನುದಾನಿತ ಪಾಲಿಟೆಕ್ನಿಕ್ ಕಾಲೇಜುಗಳಲ್ಲಿ ಸೇವೆ ಸಲ್ಲಿಸುತ್ತಿರುವ ಬೋಧಕ ಸಿಬ್ಬಂದಿಗಳಿಗೆ 7ನೇ ಎಐಸಿಟಿಇ ಪರಿಷ್ಕೃತ ವೇತನ ಶ್ರೇಣಿಯನ್ನು ಇದುವರೆವಿಗೂ ನೀಡದಿರುವುದರಿಂದ ಉಂಟಾಗಿರುವ ಗಂಭೀರ ಸಮಸ್ಯೆ ಕುರಿತು ಮಾನ್ಯ ಉಪ ಮುಖ್ಯಮಂತ್ರಿಯವರು, ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಹಾಗೂ ಕೌಶಾಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರ ಗಮನ ಸೆಳೆಯುವುದು.

**ಉತ್ತರ**

ಸರ್ಕಾರದ ಆದೇಶ ಸಂಖ್ಯೆ: ಇಡಿ 12 ಡಿಟಿಇ 2019, ದಿನಾಂಕ:24.03.2020ರಲ್ಲಿ ತಾಂತ್ರಿಕ ಶಿಕ್ಷಣ ಇಲಾಖೆಯ ಸರ್ಕಾರಿ ಮತ್ತು ಅನುದಾನಿತ ಇಂಜಿನಿಯರಿಂಗ್ ಕಾಲೇಜುಗಳ ಬೋಧಕ ವೃಂದದ ಸಿಬ್ಬಂದಿಗಳಿಗೆ 07ನೇ (2016)ರ ಪರಿಷ್ಕೃತ ಎಐಸಿಟಿಇ ವೇತನ ಶ್ರೇಣಿಗಳನ್ನು ವಿಸ್ತರಿಸಿ ಆದೇಶಿಸಲಾಗಿದೆ.

ಅದರಂತೆ, ತಾಂತ್ರಿಕ ಶಿಕ್ಷಣ ಇಲಾಖೆಯ ಅಧೀನದಲ್ಲಿರುವ 11 ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿನ ಬೋಧಕ ವೃಂದದ ಸಿಬ್ಬಂದಿಗಳಿಗೆ ಪರಿಷ್ಕೃತ ವೇತನ ಶ್ರೇಣಿಗಳಲ್ಲಿ ವೇತನ ನಿಗದಿಪಡಿಸಿ ಅನುಮೋದನೆ ನೀಡಲಾಗಿದೆ. ಇದಲ್ಲದೆ, ತಾಂತ್ರಿಕ ಶಿಕ್ಷಣ ಇಲಾಖೆಯ ಅಧೀನದಲ್ಲಿರುವ 10 ಅನುದಾನಿತ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅನುದಾನಿತ ಬೋಧಕ ವೃಂದದ ಸಿಬ್ಬಂದಿಗಳು ಅನುದಾನಿತ ಹುದ್ದೆಯಲ್ಲಿಯೇ ನೇಮಕಾತಿ ಹೊಂದಿದ್ದು, ಅನುದಾನ ರಹಿತ ಸೇವೆಯ ಸೌಲಭ್ಯಗಳನ್ನು ಪಡೆದಿಲ್ಲದಿರುವುದರಿಂದ ಇವರುಗಳಿಗೆ ಪರಿಷ್ಕೃತ ಎಐಸಿಟಿಇ ವೇತನ ಶ್ರೇಣಿಗಳಲ್ಲಿ ವೇತನ ನಿಗದಿಗೆ ಅನುಮೋದನೆ ನೀಡಲಾಗಿದೆ.

ಮುಂದುವರೆದು, ಸರ್ಕಾರದ ಆದೇಶ ಸಂಖ್ಯೆ:ಇಡಿ 12 ಡಿಟಿಇ 2019(ಭಾಗ), ದಿನಾಂಕ:22.04.2020ರಲ್ಲಿ ತಾಂತ್ರಿಕ ಶಿಕ್ಷಣ ಇಲಾಖೆಯ ಸರ್ಕಾರಿ ಮತ್ತು ಅನುದಾನಿತ ಪಾಲಿಟೆಕ್ನಿಕ್ ಸಂಸ್ಥೆಗಳ ಉಪನ್ಯಾಸಕರಿಗೆ 7ನೇ (2018ರ)ಪರಿಷ್ಕೃತ ವೇತನ ಶ್ರೇಣಿಗಳನ್ನು ಜಾರಿಗೊಳಿಸಿ ಆದೇಶಿಸಿರುತ್ತದೆ. ಅದರನ್ವಯ ಇಲಾಖೆಯ ಅಧೀನದಲ್ಲಿರುವ 85 ಸರ್ಕಾರಿ ಪಾಲಿಟೆಕ್ನಿಕ್ ಸಂಸ್ಥೆಗಳ ಬೋಧಕ ವೃಂದದ ಸಿಬ್ಬಂದಿಗಳಿಗೆ ಪರಿಷ್ಕೃತ ವೇತನ ಶ್ರೇಣಿಗಳಲ್ಲಿ ವೇತನ ನಿಗದಿಗೆ ಈಗಾಗಲೇ ಅನುಮೋದನೆ ನೀಡಲಾಗಿದೆ.

...2

ತಾಂತ್ರಿಕ ಶಿಕ್ಷಣ ಇಲಾಖೆಯ ಅಧೀನದಲ್ಲಿ ಒಟ್ಟು 44 ಅನುದಾನಿತ ಪಾಲಿಟೆಕ್ನಿಕ್ ಸಂಸ್ಥೆಗಳಿದ್ದು, ಇದರಲ್ಲಿ ಕೆಳಕಂಡ 07 ಪಾಲಿಟೆಕ್ನಿಕ್ ಸಂಸ್ಥೆಗಳು ಹಳೆಯ ಸಂಸ್ಥೆಗಳಾಗಿದ್ದು, ಸದರಿ ಸಂಸ್ಥೆಗಳಲ್ಲಿನ ಬೋಧಕ ವೃಂದದ ಸಿಬ್ಬಂದಿಗಳು ಅನುದಾನಿತ ಹುದ್ದೆಯಲ್ಲಿಯೇ ನೇಮಕಗೊಂಡಿದ್ದು, ಅನುದಾನ ರಹಿತ ಅವಧಿಯ ಸೇವೆಯನ್ನು ಪರಿಗಣಿಸಿ ಸೇವಾ ಸೌಲಭ್ಯಗಳನ್ನು ಪಡೆದಿರುವುದಿಲ್ಲ, ಇದಲ್ಲದೆ ಇಂಪ್ಯಾಕ್ಟ್ ಪಾಲಿಟೆಕ್ನಿಕ್, ಬೆಂಗಳೂರು ಈ ಸಂಸ್ಥೆಯ ಸಿಬ್ಬಂದಿಗಳೂ ಸಹ ಅನುದಾನಿತ ಸೇವೆಯನ್ನು ಮಾತ್ರ ಪರಿಗಣಿಸಿ ಸೇವಾ ಸೌಲಭ್ಯಗಳನ್ನು ಪಡೆದಿರುವುದರಿಂದ, ಈ 08 (7+1) ಅನುದಾನಿತ ಪಾಲಿಟೆಕ್ನಿಕ್ ಸಂಸ್ಥೆಗಳ ಬೋಧಕ ವೃಂದದ ಸಿಬ್ಬಂದಿಗಳಿಗೆ 07ನೇ ಪರಿಷ್ಕೃತ ಎಐಸಿಟಿಇ ವೇತನ ಶ್ರೇಣಿಯಲ್ಲಿ ವೇತನ ನಿಗದಿಗೆ ಅನುಮೋದನೆ ನೀಡಲಾಗಿರುತ್ತದೆ.

| ಕ್ರ.ಸಂ. | ಸಂಸ್ಥೆಯ ಹೆಸರು | ಕ್ರ.ಸಂ. | ಸಂಸ್ಥೆಯ ಹೆಸರು |
|---|---|---|---|
| 01 | ಎ.ಪಿ.ಎಸ್. ಪಾಲಿಟೆಕ್ನಿಕ್, ಬೆಂಗಳೂರು | 05 | ಕೆ.ಹೆಚ್.ಕೆ. ಪಾಲಿಟೆಕ್ನಿಕ್, ಧಾರವಾಡ |
| 02 | ಬಿ.ವಿ.ವಿ.ಎಸ್. ಪಾಲಿಟೆಕ್ನಿಕ್, ಬಾಗಲಕೋಟೆ | 06 | ಎಂ.ಇ.ಐ. ಪಾಲಿಟೆಕ್ನಿಕ್, ಬೆಂಗಳೂರು |
| 03 | ಜೆ.ಎಸ್.ಎಸ್. ಮಹಿಳಾಪಾಲಿಟೆಕ್ನಿಕ್ | 07 | ಎಂ.ಇ.ಐ. ಸಂಜೆ ಪಾಲಿಟೆಕ್ನಿಕ್, ಬೆಂಗಳೂರು |
| 04 | ಜೆ.ಎಸ್.ಎಸ್. ವಿಕಲಚೇತನರ ಪಾಲಿಟೆಕ್ನಿಕ್, ಮೈಸೂರು | 08 | ಇಂಪ್ಯಾಕ್ಟ್ ಪಾಲಿಟೆಕ್ನಿಕ್, ಬೆಂಗಳೂರು |

ಉಳಿದಂತೆ 2001 ರಿಂದ 2012 ರವರೆಗೆ ಅನುದಾನಕ್ಕೊಳಪಟ್ಟಿರುವ ಒಟ್ಟು 36 ಪಾಲಿಟೆಕ್ನಿಕ್ ಸಂಸ್ಥೆಗಳಲ್ಲಿನ (ಸಂಸ್ಥೆಗಳ ಪಟ್ಟಿಯನ್ನು ಅನುಬಂಧದಲ್ಲಿ ನೀಡಲಾಗಿದೆ) ಬಹುತೇಕ ಬೋಧಕ ವೃಂದದ ಸಿಬ್ಬಂದಿಗಳಿಗೆ ಸರ್ಕಾರ ಮತ್ತು ಎಐಸಿಟಿಇ ಆದೇಶದನ್ವಯ ಅವರು ಅನುದಾನರಹಿತ ಅವಧಿಯಲ್ಲಿ ಸಲ್ಲಿಸಿದ್ದ ಸೇವೆಯನ್ನು ಹಿರಿಯ/ಆಯ್ಕೆ ವೇತನ ಶ್ರೇಣಿ ಮಂಜೂರಾತಿಗೆ ಕಾಲ್ಪನಿಕವಾಗಿ ಪರಿಗಣಿಸಿ ಸೌಲಭ್ಯಗಳನ್ನು ಮಂಜೂರು ಮಾಡಲಾಗಿದೆ.

ಸರ್ಕಾರದ ಅಧಿಸೂಚನೆ ಸಂಖ್ಯೆ: ಸಂವ್ಯಶಾಇ 60 ಶಾಸನ 2013, ದಿನಾಂಕ:12.02.2014 ರಲ್ಲಿ ಕರ್ನಾಟಕ ಖಾಸಗಿ ಅನುದಾನಿತ ಶೈಕ್ಷಣಿಕ ಸಂಸ್ಥೆಗಳ ಸಿಬ್ಬಂದಿಗಳ (ವೇತನ, ನಿವೃತ್ತಿ ವೇತನ ಮತ್ತು ಇತರೆ ಸೌಲಭ್ಯಗಳ ನಿಯಂತ್ರಣ) ಅಧಿನಿಯಮ 2014 ಅನ್ನು ದಿನಾಂಕ:01.06.1995 ರಿಂದ ಅನ್ವಯವಾಗುವಂತೆ ಜಾರಿಗೊಳಿಸಲಾಗಿದೆ. ಸದರಿ ಅಧಿನಿಯಮದನ್ವಯ ಖಾಸಗಿ ಅನುದಾನಿತ ಸಂಸ್ಥೆಗಳ ಅನುದಾನಿತ ಸಿಬ್ಬಂದಿಗಳು ಅನುದಾನರಹಿತ ಅವಧಿಯಲ್ಲಿ ಸಲ್ಲಿಸಿದ ಸೇವೆಯನ್ನು ವೇತನ, ರಜೆ, ನಿವೃತ್ತಿ ವೇತನ ಮತ್ತು ಇತರ ಯಾವುದೇ ಸೇವಾ ಸೌಲಭ್ಯಗಳಿಗಾಗಿ ಪರಿಗಣಿಸತಕ್ಕದ್ದಲ್ಲವೆಂದು ತಿಳಿಸಲಾಗಿದೆ.

ಆದರೆ, ಸದರಿ ಅಧಿನಿಯಮವನ್ನು ಪ್ರಶ್ನಿಸಿ ಅನುದಾನಿತ ಸಿಬ್ಬಂದಿಗಳು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯ, ಧಾರವಾಡ ಪೀಠದಲ್ಲಿ ರಿಟ್ ಅರ್ಜಿಯನ್ನು ಸಲ್ಲಿಸಿದ್ದು, ಸದರಿ ರಿಟ್ ಅರ್ಜಿಯಲ್ಲಿ ದಿ: 10.07.2015 ರಂದು 2014ರ ಅಧಿನಿಯಮವನ್ನು ರದ್ದುಗೊಳಿಸಿರುತ್ತದೆ. ಸದರಿ ತೀರ್ಪನ್ನು ಪ್ರಶ್ನಿಸಿ, ಕರ್ನಾಟಕ ರಾಜ್ಯ ಸರ್ಕಾರವು

....3

ರಿಟ್ ಅಪೀಲು ಸಂಖ್ಯೆ: 2476/2015 ರಲ್ಲಿ ಮಾನ್ಯ ಉಚ್ಚ ನ್ಯಾಯಾಲಯದ ದ್ವಿಸದಸ್ಯ (ವಿಭಾಗೀಯ) ಪೀಠದಲ್ಲಿ ಮೇಲ್ಮನವಿ ಸಲ್ಲಿಸಿದ್ದು, ಸದರಿ ಪ್ರಕರಣವು ಮಾನ್ಯ ನ್ಯಾಯಾಲಯದ ವಿಚಾರಣೆಯ ಹಂತದಲ್ಲಿರುತ್ತದೆ. ಮುಂದುವರೆದು, ಮೇಲ್ಕಂಡ ರಿಟ್ ಅಪೀಲಿನ ಮೇಲೆ ಮಾನ್ಯ ನ್ಯಾಯಾಲಯದ ದಿನಾಂಕ: 27.11.2015ರ ಮಧ್ಯಂತರ ಆದೇಶದಲ್ಲಿ ಈ ಕೆಳಕಂಡಂತೆ ತಿಳಿಸಲಾಗಿದೆ.

> In so far as in service respondents are concerned, we record the statement of the learned Advocate General that **the state shall go on paying their current emoluments in terms of the re fixation**, subject, however, to the result of the writ appeals. However, they are restrained from initiating any recovery proceedings for recovery of the arrears of pay. So far as the retired employees are concerned learned Advocate General submits that the pension they are getting shall be continued to be paid to them. He submits that in some cases the pensions are based on the old scales and in some cases after re-fixation. The State shall be paying the pension as are paid to those retired employees as of today.
> So far as recovery proceedings and calculation of the pension in terms of the new regulation are concerned, the proceedings shall, however, remain stayed.

ಮಾನ್ಯ ನ್ಯಾಯಾಲಯದ ಮೇಲ್ಕಂಡ ಮಧ್ಯಂತರ ಆದೇಶದನ್ವಯ ಅನುದಾನಿತ ಪಾಲಿಟೆಕ್ನಿಕ್ ಸಂಸ್ಥೆಗಳ ಉಪನ್ಯಾಸಕರಿಗೆ ಅವರು ದಿನಾಂಕ:27.11.2015ರಂದು ಪಡೆಯುತ್ತಿದ್ದ ವೇತನವನ್ನೇ ಮುಂದುವರೆಸಬೇಕಾಗಿರುತ್ತದೆ. ಈ ಹಿನ್ನೆಲೆಯಲ್ಲಿ, ಸದರಿ 36 ಪಾಲಿಟೆಕ್ನಿಕ್ ಸಂಸ್ಥೆಗಳಲ್ಲಿನ ಅನುದಾನ ರಹಿತ ಅವಧಿಯನ್ನು ಪರಿಗಣಿಸಿ ಸೌಲಭ್ಯಗಳನ್ನು ಪಡೆದಿರುವ ಬೋಧಕ ವೃಂದದ ಸಿಬ್ಬಂದಿಗಳಿಗೆ 2018ರ ಪರಿಷ್ಕೃತ ವೇತನ ಶ್ರೇಣಿಗಳಲ್ಲಿ ವೇತನ ನಿಗದಿಪಡಿಸುವ ಬಗ್ಗೆ ಆದೇಶ ಕೋರಿ ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ ಇವರು ದಿ:28.08.2020ರಲ್ಲಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಸದರಿ ಪ್ರಸ್ತಾವನೆಯ ಕೆಲವು ಅಂಶಗಳಿಗೆ ಸ್ಪಷ್ಟೀಕರಣ ಕೋರಿ ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಇಲಾಖೆರವರಿಗೆ ದಿನಾಂಕ:26.09.2020ರಂದು ಸರ್ಕಾರದ ಪತ್ರ ಬರೆಯಲಾಗಿದ್ದು, ಈ ಬಗ್ಗೆ ವರದಿ ಬಂದ ನಂತರ ಅದರನ್ವಯ ಮುಂದಿನ ಕ್ರಮವಹಿಸಲಾಗುವುದು

**ಇಡಿ 21 ಟಿಪಿಇ 2021**

**(ಡಾ॥ ಅಶ್ವತ್ಥನಾರಾಯಣ್.ಸಿ.ಎನ್)**
ಉಪ ಮುಖ್ಯ ಮಂತ್ರಿಗಳು
(ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಹಾಗೂ ಜೀವನೋಪಾಯ ಇಲಾಖೆ)

## ಅನುಬಂಧ–1

**ಅನುದಾನಿತ ಇಂಜಿನಿಯರಿಂಗ್ ಕಾಲೇಜುಗಳು:**

| ಕ್ರಸಂ. | ಸಂಸ್ಥೆಯ ಹೆಸರು | ಸ್ಥಳ |
|---|---|---|
| 1 | ಪಿ.ಡಿ.ಎ. ಇಂಜಿನಿಯರಿಂಗ್ ಕಾಲೇಜು | ಕಲಬುರ್ಗಿ |
| 2 | ಬಿ.ವಿ.ಬಿ. ಇಂಜಿನಿಯರಿಂಗ್ ಕಾಲೇಜು | ಹುಬ್ಬಳ್ಳಿ |
| 3 | ಬಸವೇಶ್ವರ ಇಂಜಿನಿಯರಿಂಗ್ ಕಾಲೇಜು | ಬಾಗಲಕೋಟೆ |
| 4 | ಮಲೆನಾಡು ಇಂಜಿನಿಯರಿಂಗ್ ಕಾಲೇಜು | ಹಾಸನ |
| 5 | ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್ ಕಾಲೇಜು | ಮೈಸೂರು |
| 6 | ಜಯಚಾಮರಾಜೇಂದ್ರ ಇಂಜಿನಿಯರಿಂಗ್ ಕಾಲೇಜು | ಮೈಸೂರು |
| 7 | ಪಿ.ಇ.ಎಸ್. ಇಂಜಿನಿಯರಿಂಗ್ ಕಾಲೇಜು | ಮಂಡ್ಯ |
| 8 | ಡಾ.ಅಂಬೇಡ್ಕರ್ ಇಂಜಿನಿಯರಿಂಗ್ ಕಾಲೇಜು | ಬೆಂಗಳೂರು |
| 9 | ಬಿ.ಎಂ.ಎಸ್. ಇಂಜಿನಿಯರಿಂಗ್ ಕಾಲೇಜು | ಬೆಂಗಳೂರು |
| 10 | ಬಿ.ಎಂ.ಎಸ್. ಇಂಜಿನಿಯರಿಂಗ್ ಕಾಲೇಜು (ಸಂಜೆ) | ಬೆಂಗಳೂರು |

## ಅನುಬಂಧ-2

### ಅನುದಾನಿತ ಪಾಲಿಟೆಕ್ನಿಕ್ ಸಂಸ್ಥೆಗಳು:

| ಕ್ರ.ಸಂ. | ಸಂಸ್ಥೆಯ ಹೆಸರು | ಸ್ಥಳ |
| --- | --- | --- |
| 1. | ಜವಾಹರ್‌ಲಾಲ್ ನೆಹರು ಪಾಲಿಟೆಕ್ನಿಕ್, | ಠಾಣಾಕುಶನೂರು |
| 2. | ನೂತನ ವಿದ್ಯಾಲಯ ಪಾಲಿಟೆಕ್ನಿಕ್, | ಕಲಬುರ್ಗಿ |
| 3. | ಕೆ.ಸಿ.ಟಿ. ಪಾಲಿಟೆಕ್ನಿಕ್, | |
| 4. | ಎಸ್.ಇ.ಎಸ್. ಪಾಲಿಟೆಕ್ನಿಕ್ | ಸಿರಗುಪ್ಪ |
| 5. | ಟಿ.ಎಂ.ಎ.ಇ.ಎಸ್ ಪಾಲಿಟೆಕ್ನಿಕ್ | ಹೊಸಪೇಟೆ |
| 6. | ಡಾ.ಜಿ.ಎಸ್.ಮೇಲ್ಕೋಟೆ ಗ್ರಾಮೀಣ ಪಾಲಿಟೆಕ್ನಿಕ್ | ಕುಕನೂರು |
| 7. | ಸಿ.ವಿ.ಚರಂತಿಮಠ ರೂರಲ್ ಪಾಲಿಟೆಕ್ನಿಕ್ | ಹುನಗುಂದ |
| 8. | ಎಸ್.ಆರ್. ವಸ್ತ್ರದ ಪಾಲಿಟೆಕ್ನಿಕ್ | ಗುಳೇದಗುಡ್ಡ |
| 9. | ಗೋಮಟೇಶ ಪಾಲಿಟೆಕ್ನಿಕ್, | |
| 10. | ಭರತೇಶ ಪಾಲಿಟೆಕ್ನಿಕ್ | ಬೆಳಗಾವಿ |
| 11. | ಮರಾಠಾ ಮಂಡಳ ಪಾಲಿಟೆಕ್ನಿಕ್ | |
| 12. | ಎಸ್.ಜಿ.ಇ.ಇ.ಎಸ್. ರೂರಲ್ ಪಾಲಿಟೆಕ್ನಿಕ್ | ತಾರಿಹಾಳ |
| 13. | ಟಿ.ಎಸ್.ಐ.ಟಿ. ಪಾಲಿಟೆಕ್ನಿಕ್ | ಹುಬ್ಬಳ್ಳಿ |
| 14. | ರೂರಲ್ ಪಾಲಿಟೆಕ್ನಿಕ್ | ಹಂಸಬಾವಿ |
| 15. | ಅಂಜುಮನ್ ಇಸ್ಲಾಂ ಪಾಲಿಟೆಕ್ನಿಕ್ | ಗದಗ |
| 16. | ರೂರಲ್ ಪಾಲಿಟೆಕ್ನಿಕ್ | ಹುಲಕೋಟಿ |
| 17. | ಎಸ್.ಜೆ.ಎಂ. ಪಾಲಿಟೆಕ್ನಿಕ್ | ಚಿತ್ರದುರ್ಗ |
| 18. | ಬಾಪೂಜಿ ಪಾಲಿಟೆಕ್ನಿಕ್, | ಶಾಬನೂರು |
| 19. | ಎಸ್.ಟಿ.ಜೆ. ಪಾಲಿಟೆಕ್ನಿಕ್ | ಹರಪನಹಳ್ಳಿ |
| 20. | ಆರ್.ಎನ್.ಶೆಟ್ಟಿ ಪಾಲಿಟೆಕ್ನಿಕ್ | ಶಿರಸಿ |
| 21. | ವಿದ್ಯಾಧಿರಾಜ ಪಾಲಿಟೆಕ್ನಿಕ್ | ಕುಮಟ |
| 22. | ನಿರಂಜನಸ್ವಾಮಿ ಪಾಲಿಟೆಕ್ನಿಕ್, | ಸುಂಕದಕಟ್ಟೆ |
| 23. | ಎನ್.ಆರ್.ಎ.ಎಂ. ಪಾಲಿಟೆಕ್ನಿಕ್ | ನಿಟ್ಟೆ |
| 24. | ಎಸ್.ಎನ್.ಎಸ್. ಪಾಲಿಟೆಕ್ನಿಕ್ | ಮೂಡುಬಿದರೆ |
| 25. | ಕೆ.ವಿ.ಜಿ. ಪಾಲಿಟೆಕ್ನಿಕ್, | ಸುಳ್ಯ |

| | | |
|---|---|---|
| 26. | ಎಸ್.ಜೆ.ಎಂ. ಪಾಲಿಟೆಕ್ನಿಕ್ | ಬೀರೂರು |
| 27. | ಡಿ.ವಿ.ಎಸ್. ಪಾಲಿಟೆಕ್ನಿಕ್, | ಶಿವಮೊಗ್ಗ |
| 28. | ಸಹ್ಯಾದ್ರಿ ಪಾಲಿಟೆಕ್ನಿಕ್, | ತೀರ್ಥಹಳ್ಳಿ |
| 29. | ಸಂಜಯ ಮೆಮೋರಿಯಲ್ ಪಾಲಿಟೆಕ್ನಿಕ್ | ಸಾಗರ |
| 30. | ಹೆಚ್.ಎಂ.ಎಸ್. ಪಾಲಿಟೆಕ್ನಿಕ್ | ತುಮಕೂರು |
| 31. | ಅಲ್-ಖತೀಬ್ ಪಾಲಿಟೆಕ್ನಿಕ್ | ಬೆಂಗಳೂರು |
| 32. | ಪಿ.ವಿ.ಪಿ. ಪಾಲಿಟೆಕ್ನಿಕ್ | |
| 33. | ವೆಂಕಟೇಶ್ವರ ಪಾಲಿಟೆಕ್ನಿಕ್ | |
| 34. | ಡಿ.ಬನುಮಯ್ಯ ಪಾಲಿಟೆಕ್ನಿಕ್ | ಮೈಸೂರು |
| 35. | ಜೆ.ಎಸ್.ಎಸ್. ಪಾಲಿಟೆಕ್ನಿಕ್ | ನಂಜನಗೂಡು |
| 36. | ಕೆ.ವಿ.ಟಿ. ಪಾಲಿಟೆಕ್ನಿಕ್ | ಚಿಕ್ಕಬಳ್ಳಾಪುರ |